ವಸ್ತುವೆಂದರೆ ಸತ್ತು ಒಣಗಿಹೋದ ಉಡಕ್ಕೆ ಎಣ್ಣೆ ತುಂಬಿ, ಗಿಡಮೂಲಿಕೆ, ನಾರು, ಬೇರುಗಳ ಜೊತೆಯಲ್ಲಿ ಬೆರೆಸಿ, ನೋವಿನ ಎಣ್ಣೆಯಾಗಿ ಮಾರಾಟ ಮಾಡುತ್ತಿದ್ದ ದೃಶ್ಯ. ಹಾಗೇ ಆಡು, ಕುರಿ, ಮೇಕೆಯ ಮಾಂಸವನ್ನು ಚೆನ್ನಾಗಿ ಬೇಯಿಸಿ ಅದಕ್ಕೆ ಓಲೆ ಬೆಲ್ಲ, ತೆಂಗಿನ ಹಾಲು, ಒಣಶುಂಠಿಯ ಪುಡಿ, ಜೀರಿಗೆ, ಮೆಂತ್ಯೆಯಂತಹ ಪದಾರ್ಥಗಳನ್ನು ಬಳಸಿ ತಯಾರಿಸುವ ಆಡಿನ ಲೇಹ್ಯ. ಇದನ್ನು ಖರೀದಿಸಲು ಕೆಲವರು ಮುಗಿಬಿದ್ದರೆ, ಮತ್ತೆ ಕೆಲವರು ಅಸಹ್ಯದಿಂದ ಆ ಕಡೆ ಸುಳಿಯುತ್ತಿರಲಿಲ್ಲ. ಇವೆರಡೂ ವಸ್ತುಗಳು ನಮ್ಮೂರಿನ ಸಂತೆಯನ್ನು ವೈಶಿಷ್ಟ್ಯಪೂರ್ಣವಾಗಿರುವಂತೆ ನೋಡಿಕೊಂಡವು.

ಹಣ ಕಟ್ಟಿ ಎಕ್ಕ ರಾಜರಾಣಿ ಆಟ ಆಡುವ, ಹೆಣ್ಣುಮಕ್ಕಳಿಗೆ ಬಳೆ ತೊಡಿಸುವ ಬಳೆಗಾರನಿಂದ ಶುರುವಾಗಿ, ಕಲ್ಲಂಗಡಿ, ಪೇರಳೆಯಂಥ ಹಣ್ಣುಗಳನ್ನು ಕತ್ತರಿಸಿ, ಉಪ್ಪುಕಾರ ಹಾಕಿ ಮಾರುವ, ಕಜ್ಜಾಯ, ವಡೆ, ಖಾರಗಳನ್ನು ಅಲ್ಲೇ ಸೀಮೆಎಣ್ಣೆ ಸ್ಟೌ ಹಾಕಿ, ಬಿಸಿಬಿಸಿ ಎಣ್ಣೆಯಲ್ಲಿ ಕರಿದು ಮಾರುವ, ಮಂಡಕ್ಕಿ, ಶೇಂಗಾವನ್ನು ಮೂಟೆಗಳಲ್ಲಿ ಪೇರಿಸಿಟ್ಟು ಪಾವು, ಸೇರಿನಲ್ಲಿ ಖರೀದಿಸುವ, ತೆಂಗಿನ ಎಣ್ಣೆ, ಕಡಲೆ ಎಣ್ಣೆಗಳನ್ನು ಕಬ್ಬಿಣದ ಡಬ್ಬಗಳಲ್ಲಿ ಹಾಕಿ ಲೀಟರ್‌ಗಳಲ್ಲಿ ಅಳೆದುಕೊಡುವ, ಮೀನು-ಮಾಂಸಗಳನ್ನು ಮುತ್ತುಗದ, ಕೆಸುವಿನ ಎಲೆಗಳಲ್ಲಿ ಸುತ್ತಿ ಕೊಡುವ ಕ್ರಮ ನಮ್ಮೂರಿನಲ್ಲಿತ್ತು. ಈಗ ಯಾವುದೂ ಕಾಣಿಸುತ್ತಿಲ್ಲ. ಎಲ್ಲವೂ ಪ್ಯಾಕೇಟ್ ಮಯವಾಗಿದೆ.

ನಮ್ಮೂರ ಸಂತೆಗೆ ಬೊಂಬೆಯ ವೇಷ ತೊಟ್ಟು ಕುಣಿಯುವ, ದಸರಾ, ದೀಪಾವಳಿ ಸಂದರ್ಭದಲ್ಲಿ ಮಂಗಳೂರು ಕಡೆಯಿಂದ 'ಪಿಲಿಪಂಜಿ' (ಹುಲಿ ವೇಷದ ಕುಣಿತ) ಕುಣಿತದವರು ಬರುತ್ತಾರೆ. ಇನ್ನೂ ಡಬ್ಬಿಯಲ್ಲಿ ರೀಲು ತುಂಬಿ ಸಣ್ಣ ದರ್ಪಣದ ಮೂಲಕ ಆಗ್ರಾದ ತಾಜ್‌ಮಹಲ್, ಮೈಸೂರು ಅರಮನೆ, ಬೊಂಬಾಯಿ ಇತ್ಯಾದಿ ಊರುಗಳನ್ನು ಕಾಸಿಗೊಂದರಂತೆ ತೋರಿಸುತ್ತಿದ್ದರು.



ನಮ್ಮೂರಿನ ಸಂತೆಗೆ ತರಕಾರಿ ಬಲ್ಕ್ ಆಗಿ ಬರುವುದು ಹದಿನೈದು ಕಿಲೋಮೀಟರ್ ದೂರದ ದಟ್ಟಡವಿಯಾದ ಸೂರ್ಲಬ್ಬಿ ಮತ್ತು ಗರ್ವಾಲೆ ಎಂಬ ಊರಿನಿಂದ. ಈ ಊರಿನಿಂದ ಮುಂಜಾನೆ ಐದರ ಹೊತ್ತಿಗೆ ಒಂದೇ ಒಂದು ಬಸ್ಸು ಬರುತ್ತದೆ. ದೊಡ್ಡ ಚೀಲಗಳಲ್ಲಿ ತರಕಾರಿ ಬೆಳೆದ ರೈತ ಅದನ್ನು ತುಂಬಿಕೊಂಡು ಎಂಟು ಗಂಟೆಯ ಹೊತ್ತಿಗೆ ನಮ್ಮೂರಿನ ಸಂತೆಯನ್ನು ತಲುಪಿದಾಗ ವ್ಯಾಪಾರಿಗಳು ಬಸ್ಸಿನೊಳಗೆ, ಸಿಹಿಗೆ ಮುತ್ತಿಕೊಳ್ಳುವ ಇರುವೆಗಳಂತೆ ತರಕಾರಿಯನ್ನು ಹೋಲ್‌ಸೇಲ್ ಆಗಿ ಕೊಳ್ಳಲು ನಾಮುಂದು, ತಾಮುಂದು ಎಂದು ಮುನ್ನುಗ್ಗುತ್ತಾರೆ. ಆ ಊರಿನ ತರಕಾರಿಗೆ ಇಷ್ಟು ಮೌಲ್ಯ ಬರಲು ಕಾರಣ ಅಲ್ಲಿನ ಹವಾಗುಣ ಮತ್ತು ನೈಸರ್ಗಿಕ ಗೊಬ್ಬರ; ವಿಶೇಷವಾಗಿ ಹಂದಿ ಮತ್ತು ಸಗಣಿ ಗೊಬ್ಬರವನ್ನೇ ಅವರು ಬಳಸುತ್ತಾರೆ. ಶನಿವಾರ ಜರುಗುವ ಸಂತೆಗೆ ಶುಕ್ರವಾರ ಸಂಜೆಯ ಹೊತ್ತಿಗೆ ಸೂರ್ಲಬ್ಬಿ ಮತ್ತು ಗರ್ವಾಲೆಯ ಇಕ್ಕಟ್ಟಾದ ರಸ್ತೆಯ ಇಕ್ಕೆಲದಲ್ಲಿ ತರಕಾರಿ ತುಂಬಿಟ್ಟ ಚೀಲಗಳು ರಾರಾಜಿಸುತ್ತಿರುತ್ತವೆ. ಯಾರೊಬ್ಬರೂ ಆ ಚೀಲದಲ್ಲಿರುವ ವಸ್ತುಗಳನ್ನು ಕಳ್ಳತನ ಮಾಡಲಾರರು. ಮುಂಜಾನೆ ಬಸ್ಸು ಬರುವವರೆಗೂ ಆ ತುಂಬಿದ ಚೀಲಗಳು ಯಾರ ಕಣ್ಗಾವಲಿಲ್ಲದೆ ಹಾಗೇ ಇರುತ್ತಿದ್ದವು.

ಇನ್ನು, ಸಂತೆಯಲ್ಲಿ ಒಂದಿಷ್ಟು ಖರೀದಿ ಮಾಡಿಬರುವ ಬಾಪ, ಸಂತೆಯ ದಿನ ಮೀನೋ, ಮಾಂಸವನ್ನೋ ತರುತ್ತಾರೆ. ಬಾಪ ತರಕಾರಿ ತರಲಿ, ಸೊಪ್ಪು ತರಲಿ, ಮಾಂಸ, ಮೀನೇ ತರಲಿ ನಾನು ಅಕ್ಕ ಕಾಯೋದು ಬಾಪ ತರುವ ನೆಲಗಡಲೆಗೋ, ಕಜ್ಜಾಯ, ಮಂಡಕ್ಕಿಗೋ, ಹಣ್ಣುಹಂಪಲಿಗೋ, ಬಾಂಬೆ ಮಿಠಾಯಿಗೋ ಮಾತ್ರವಾಗಿತ್ತು.

ಚರಿತ್ರೆಯನ್ನು ತಿರುವಿ ಹಾಕಿದರೆ ದನಕರುಗಳನ್ನು, ಕೋಳಿಕುರಿಗಳನ್ನು, ಆಡುಮೇಕೆಗಳನ್ನು ಮಾರುವ ಸಂತೆಗಳು ನಮ್ಮಲ್ಲಿದ್ದವು. ಬಕ್ರೀದ್ ಬಂತೆಂದರೆ ಸಾಕು, ಆಡುಕುರಿಗಳಿಗಾಗಿ ಇರುವ ಸಂತೆಯು ರೈತರು ಮತ್ತು ವರ್ತಕರಿಂದ ತುಂಬಿ ಹೋಗುತ್ತದೆ. ಆದರೆ, ಮನುಷ್ಯರನ್ನು ಮಾರುವ ಮತ್ತು ಕೊಳ್ಳುವ ಸಂತೆಗಳು ಇತ್ತೆಂದರೆ ನೀವು ನಂಬುವಿರಾ?. ಯುಕ್ಯಾಟೆಕ್ ಮಾಯಾ ಭಾಷೆಯಲ್ಲಿ 2006ರಲ್ಲಿ ತೆರೆ ಕಂಡು ಇಡೀ ವಿಶ್ವ ಚಲನಚಿತ್ರರಂಗ ನಿಬ್ಬೆರಗಾದ 'ಅಪೋಕ್ಯಾಲಿಪ್ಟಾ' ಸಿನಿಮಾದಲ್ಲಿ, ಬುಡಕಟ್ಟುಗಳು